ಖುಷಿಯೆನಿಸಿದರೂ ಅದರ ಹಿಂದೆಯೆ ಮತ್ತೊಂದು ಪ್ರಶ್ನೆ ಅವನನ್ನು ಕಟ್ಟಿ ಹಾಕಿತು. 'ಮಾಸ್ತರು ತನ್ನನ್ನು ತಮ್ಮ ಬಳಿ ಬಿಟ್ಟುಕೊಳ್ಳುತ್ತಾರೆಯೆ?' ಎಂದೂ ಅವರ ಹತ್ತಿರವೇ ಹೋಗದ ಅವನಿಗೆ ಈ ಪ್ರಶ್ನೆ ಮೂಡಿದ್ದು ಸಹಜವಾಗಿತ್ತು. ಯಾವುದೊಂದೂ ಗೊತ್ತಾಗದೆ ಉಳಿದ ಅದೊಂದೇ ದಾರಿಯನ್ನು ನೆಚ್ಚಿಕೊಂಡು ಸೀಸದ ಕಡ್ಡಿಯ ಮಂಪರಿನಲ್ಲೇ ಇಡೀ ರಾತ್ರಿ ಕಳೆದ.

ಮರುದಿನದ ಸೂರ್ಯ ಅವನ ಪಾಲಿಗೆ ವಿಚಿತ್ರ ಸೋಮಾರಿಯಂತೆ ತೋರಿದ. ಸೂರ್ಯನೇನು ಹೆಳವನೇ? ಯಾಕಿಷ್ಟು ಕುಂಟುತ್ತಾನೆ? ಗಂಟೆಯೊಂದು ದಿನವಾಗಿಯೆ ಕಾಡುತ್ತದೆಯಲ್ಲ ಎಂಬ ಭಾವದಲ್ಲಿ ತೊಳಲಿದ. ಅಂದು ಒಂದು ಗಂಟೆ ಮುಂಚಿತವಾಗಿ ಶಾಲೆ ಸೇರಿದ ಪರಸು. ತನಗಿಂತಲೂ ಮೊದಲು ಬಂದಿದ್ದ ಹುಡುಗರ ಸೀಸದ ಕಡ್ಡಿಗಳೆಲ್ಲಾ ಚುಚ್ಚುವಷ್ಟು ಚೂಪಾಗಿದ್ದವು. ಅವೆಲ್ಲ ನೋಡಿದ್ದೆ ಅವನಿಗೆ ದುಃಖ ಉಕ್ಕಿ ಬಂತು. ಹೇಳಲಾಗದ ಸಂಕಟ ಅನುಭವಿಸಿದ. ಶಾಪಗ್ರಸ್ತ ಗಂಧರ್ವನಂತೆ ಹಲುಬಿದ. ಬ್ಯಾಗಿನಲ್ಲಿದ್ದ ತನ್ನ ಸೀಸದ ಕಡ್ಡಿ ನೋಡಿಕೊಂಡ. ಯಾರೂ ಇಲ್ಲದ ಅನಾಥ ಮಗುವಿನಂತೆ ಬಿದ್ದುಕೊಂಡಿತ್ತು. ಎಲ್ಲರೂ ತಮ್ಮ ತಮ್ಮ ಚೂಪು ಕಡ್ಡಿಗಳನ್ನು ತೋರಿ, 'ನಿಂದೆಲ್ಲಿ!?...' ಅಂತ ಕೇಳುವಾಗ ಸುಮ್ಮನೆ ಅವರನ್ನು ನೋಡುತ್ತಿದ್ದ.

ಗಂಟೆ ಬಾರಿಸಿದ ಬಳಿಕ ಮೊದಲ ಅವಧಿ ತೆರೆದುಕೊಂಡಿತು. ಮಾಸ್ತರ ಬಳಿ ಹೋಗಿ ಕೆತ್ತಿಸಿಕೊಂಡು ಬರುವುದಕ್ಕೆ ಸಾಕಷ್ಟು ಹಿಂದೇಟು ಹಾಕುತ್ತಲೇ ಇದ್ದ. ಬ್ಯಾಗಿನೊಳಗಿನ ಸೀಸದ ಕಡ್ಡಿಯನ್ನೂ, ಮಾಸ್ತರರ ಮುಖವನ್ನೂ ಅದಲು ಬದಲಿಸುತ್ತ ನೋಡುತ್ತಲೇ ಇದ್ದ. ಅವನೊಳಗಿನ ಎಲ್ಲಾ ಇಂದ್ರಿಯಗಳು ಅವನಿಗೆ ಕೈಕೊಟ್ಟು ಬೀದಿ ಬಳಿ ತಳ್ಳಿ ಹೋಗಿದ್ದವು. ಸೀಸದ ಕಡ್ಡಿಯನ್ನು ನೋಡಿ ನೋಡಿ ಒಳಗೊಳಗೆ ಪುಟಿದು ನಿಲ್ಲುತ್ತಿದ್ದ. ಎಲ್ಲಿಂದಲೊ ಬಂದ ನಿಗೂಢ ಶಕ್ತಿಯೊಂದನ್ನು ವಶಪಡಿಸಿಕೊಂಡವನಂತೆ ಧೈರ್ಯ ತುಂಬಿಕೊಂಡು ಎದ್ದು ನಿಂತ. ತಣ್ಣನೆಯ ಕೈಯೊಳಗೆ ಕೂತಿದ್ದ ಸೀಸದ ಕಡ್ಡಿ ತನ್ನ ಮುಂದಿನ ಕ್ರಿಯೆಯ ಬಗ್ಗೆ ಕುತೂಹಲಿಯಾಗಿತ್ತು. ನಿನ್ನೆಯಿಂದ ಅದುಮಿಕೊಂಡಿದ್ದ ಸಂಕಟದ ವಿರುದ್ಧ ಈಜುವ ಹಟವಾದಿಯಂತೆ ಮಾಸ್ತರ ಬಳಿ ಭರಭರ ನಡೆದ. ಅವರ ಬಳಿ ಸಾರುತ್ತಲೇ ತನ್ನ ಕಾಲು ಕೈಕೊಡುತ್ತಿವೆ ಅನಿಸಿತು. ಗಂಟಲು ಪಸೆ ಕಳೆದುಕೊಂಡಿತು. ಎದೆ ಡವಡವಗುಟ್ಟಿತು. ಆದರೂ, ಸೀಸದ ಕಡ್ಡಿಯನ್ನು ಅವರ ಮುಂದೆ ಹಿಡಿದು ನಿಂತ. ಮಾಸ್ತರು ಅದ್ಯಾವುದೊ ಕೆಲಸದಲ್ಲಿ ಮುಳುಗಿ ಹೋಗಿದ್ದರು. ಒಣಗಿದ ದನಿಯಲ್ಲೇ, 'ಸಾ...' ಅಂದ ಪರಸು. ಮಾಸ್ತರು ತಿರುಗಿ 'ಏನು!?...' ಎಂಬಂತೆ ನೋಡಿದರು. ಅವರ ನೋಟವೇ ಭಯ ಹುಟ್ಟಿಸಿತ್ತು. ಭಯದಿಂದ ಸುಮ್ಮನೆ ನಿಂತು ಬಿಟ್ಟ! ಅವರ ಬಳಿ ತಾನು ಹೋದದ್ದು ಯಾಕೆ ಎಂಬುದೂ ಕೂಡ ಮರೆತಂತೆ ಗಲಿಬಿಲಿಗೊಂಡ. ಎರಡು ಬಾರಿ ನೋಡಿದ ಮಾಸ್ತರು, 'ಹೋಗು ಹೋಗು... ಇಲ್ಲೇನು ಕೆಲ್ಸ ನಿಂದು?' ಅಂದು ಬಿಟ್ಟರು. ಅವನಿಗೆ ಮತ್ತೆ ಮಾತೇ ಬರಲಿಲ್ಲ. ಸೀಸದ ಕಡ್ಡಿ ಕೆತ್ತುವುದಕ್ಕೆ ಅವರನ್ನು ಕೇಳುವುದೇ ಬೇಡ ಅನಿಸಿತು. ಹೆಜ್ಜೆಗಳು ಹಿಂದೆ ಸರಿದವು.

ಅವನಿಗೆ ಸೀಸದ ಕಡ್ಡಿಯ ಮೇಲೆ ಶತಮಾನದಿಂದ ಕಾಪಿಟ್ಟುಕೊಂಡಂತಹ ಕೋಪ ಬಂತು. ಯಾಕೊ ಅದರ ಸಹವಾಸ ಸಾಕು ಅನಿಸಿತು. 'ನಾ ಎಲ್ಲಿಯುವವನು? ಎಷ್ಟರವನು ಎಂದು ತೋರಿಸಲು ಈ ಮೂರು ಇಂಚಿನ ಕಡ್ಡಿ ಸಾಕೇನು?' ಎಂಬ ಯೋಚನೆ ಬಂದದ್ದೆ ದುಃಖ ಉಮ್ಮಳಿಸಿತು. ಆ ಸೀಸದ ಕಡ್ಡಿ ಅವನ ಬಳಿಗೆ ಅವನದೊಂದು ನೋವಿನ ರೂಪಕವಾಗಿಯೆ ಬಂದಿತ್ತು. ಸೀಸದ ಕಡ್ಡಿ ಮತ್ತು ಅವನ ನಡುವೆ ಬೇರೆ ಯಾವ ವ್ಯತ್ಯಾಸಗಳು ಉಳಿದಿರಲಿಲ್ಲ. ಆ ಕ್ಷಣಕ್ಕೆ ಅದರ ಮೇಲೆ ಅವನಿಗೆ ಜಿಗುಪ್ಸೆಯಾಯ್ತು. ಅದನ್ನು ಬ್ಯಾಗಿನೊಳಗೆ ತಳ್ಳಿ, ಇಣುಕಲು ಕಾದ ಕಣ್ಣೀರ ವಿರುದ್ಧ ಯುದ್ಧ ಜಾರಿಯಲ್ಲಿಟ್ಟು ಕಪ್ಪು ಹಲಗೆಯನ್ನೇ ತದೇಕಚಿತ್ತ ನೋಡುತ್ತಾ ಕೂತ. ಅಕ್ಷರಗಳು ಮಸುಕು ಮಸುಕಾಗಿ ಕಾಣಿಸತೊಡಗಿದವು. ಸಂಜೆ ಮನೆಗೆ ಹೋಗುವಾಗ ಹಾದಿಯಲ್ಲಿನ ಒಂದು ಹಾಳು ಬಾವಿಗೆ ಎಸೆಯಲು ಆ ಕ್ಷಣವೇ ನಿರ್ಧರಿಸಿದ. ಎದೆಯೊಳಗೆ ಏನೊ ನಿರಾಳವೆನಿಸಿತು. ಜಾರಿ ಬಿದ್ದ ಎರಡು ಹನಿಗಳನ್ನು ಗಾಳಿ ಜೋರಾಗಿ ಬೀಸಿ ಕಬಳಿಸಿ ಮಾಯವಾಯಿತು. ಪರಸು ಈಗ ಮತ್ತಷ್ಟು ಹಗುರವಾದ. ಕಪ್ಪು ಹಲಗೆಯ ಮೇಲೆ ಬರೆದ, 'ಬಾವಿಯಲ್ಲಿ ಬಿದ್ದ ಚಂದ್ರ...' ಪದ್ಯ ಸ್ಪಷ್ಟವಾಗಿ ಕಾಣಿಸುತ್ತಿತ್ತು. ●